# ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

ಓ ಎಸ್ ನಂ ಃ **49/2012**

ಪಿಡಬ್ಲ್ಯು ಃ 1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕ ಃ **13-10-2022**

**ಪಾಟೀ ಸವಾಲು ಃ** ಶ್ರೀ ಎಸ್.ಆರ್.ಜೆ ವಕೀಲರಿಂದ

ನಾನು ಬೆಂಗಳೂರಿನಲ್ಲಿ ವಾಸಿಸುತ್ತೇನೆ. ನಾನು ಬೆಂಗಳೂರಿನಲ್ಲಿಯೇ ಬೆಳೆದಿರುತ್ತೇನೆ. ವಾದಿಯವರು ನನಗೆ 45 ವರ್ಷದಿಂದ ಬೆಂಗಳೂರಿನಲ್ಲಿ ಪರಿಚಯವಿರುತ್ತಾರೆ. ಈ ದಾವೆಯನ್ನು ನಾನೇ ಹೂಡಿರುತ್ತೇನೆ. ವಾದಿಯವರು ಈಗ ಹೊರದೇಶದಲ್ಲಿ ಇದ್ದಾರೆ. ಅವರು ಬಂದು ಹೋಗುತ್ತಿರುತ್ತಾರೆ. ಅವರಿಗೆ ಆರ್ಜಿ ಗ್ರಾಮದಲ್ಲಿ ಸರ್ವೆ ನಂಬರ್ 14/1, 14/2, 14/3, 30/1 ಮತ್ತು 30/2 ರಲ್ಲಿ ಆಸ್ತಿಗಳಿರುತ್ತದೆ. ದಾವಾ ಸ್ವತ್ತಿನ ಅನುಸೂಚಿಯನ್ನು  ನಾನು ನೋಡಿದ್ದೇನೆ. ದಾವಾ ಅನುಸೂಚಿ ಸ್ವತ್ತು ಜಿ ಅವರಿಗೆ ಸೇರುವುದಿಲ್ಲ. ಆದರೆ ಅದನ್ನು ದಾವಾ ಅನುಸೂಚಿಯಲ್ಲಿ ಯಾಕೆ ಸೇರಿಸಿದ್ದಾರೆ ಎಂಬುದು ನನಗೆ ಹೇಳಲು  ಸಾಧ್ಯವಿಲ್ಲ. ಆದರೆ ದಾವೆಯಲ್ಲಿ ದಾವಾ ಅನುಸೂಚಿ ಸ್ವತ್ತುಗಳು ವಾದಿಗೆ ಸೇರುತ್ತದೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಮಾಲೀಕರ ಹೆಸರನ್ನು ಆರ್.ಟಿ.ಸಿಯಲ್ಲಿ ನಮೂದು ಮಾಡಲಾಗುತ್ತದೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತು ಜಿ ರ ಆರ್.ಟಿ.ಸಿಯನ್ನು ಈಗ ನೋಡುತ್ತಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಅದರಲ್ಲಿ 1 ನೇ ಪ್ರತಿವಾದಿಯ ಹೆಸರು ಸ್ವಾಧೀನದಾರ ಹಾಗೂ ಹಕ್ಕುದಾರ ಎಂದು ನಮೂದಾಗಿದೆ ಎಂದರೆ ಸರಿ. ನನಗೆ ಸರ್ವೆ ನಂಬರ್ 375 ರ ಬಗ್ಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯವರು ವಾದಿಯವರ ಆಸ್ತಿಯ ಆಜುಬಾಜು ಎಂದರೆ ಇರಬಹುದು. ವಾದ ಪತ್ರದ 9 ನೇ ಪುಟದಲ್ಲಿ ಸರ್ವೆ ನಂಬರ್ 375 ರ ಸ್ವತ್ತು 1 ನೇ ಪ್ರತಿವಾದಿಯ ಹೆಸರು ಹಕ್ಕುದಾರ ಎಂದು ನಮೂದಾಗಿದೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತು ಹೆಚ್ ವಾದಿಗೆ ಸೇರಿರುವುದಿಲ್ಲ ಎಂದರೆ ಸರಿ. ಸದರಿ ಆಸ್ತಿಗಳ ಇತರ ಪ್ರತಿವಾದಿಗಳಿಗೆ ಸೇರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯವರು ಮೃತಪಟ್ಟಿರುತ್ತಾರೆ ಅವರಿಗೆ ಸಂಬಂಧಿಕರು ಇರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಆಕೆಗೆ ಅಣ್ಣ ಹಾಗೂ ಅಣ್ಣನ ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ಕಾನೂನು ಪ್ರತಿನಿಧಿಗಳನ್ನು ನಾನು ಈ ಪ್ರಕರಣದಲ್ಲಿ ಪಕ್ಷಕಾರರನನ್ನಾಗಿ ಮಾಡಿರುವುದಿಲ್ಲ. ವಾದಿಗೆ ಸೇರಿದ ಸ್ವತ್ತುಗಳ ಇತಿಹಾಸ ನನಗೆ ಗೊತ್ತಿಲ್ಲ. ಆದರೆ ಅದರ ಬಗ್ಗೆ ಸಾಮಾನ್ಯವಾಗಿ ತಿಳಿದುಕೊಂಡಿರುತ್ತೇನೆ. ಕೆಲವು ಸ್ವತ್ತುಗಳು ಅವರ ಕುಟುಂಬದಲ್ಲಿ ಇತ್ತು ಹಾಗೂ ಇನ್ನು ಕೆಲವು ಸ್ವತ್ತುಗಳು ಅವರ ತಂದೆ ಖರೀದಿಸಿರುತ್ತಾರೆ. ಅದನ್ನು ಅವರ ತಂದೆ ಸಿದ್ದಲಿಂಗಪ್ಪ ಹಾಗೂ ಭಾವಾನಿ ಅವರಿಂದ ಖರೀದಿಸಿರುತ್ತಾರೆ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಸರ್ವೆ

ನಂಬರ್ 375 ರ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ. ನನಗೆ ಈ ಪ್ರಕರಣದ ಬಗ್ಗೆ ಖುದ್ದು ಮಾಹಿತಿ ಇಲ್ಲ, ಆದ ಕಾರಣ ವಾದಿಗೆ ಸೇರಿದ ಆಸ್ತಿಗಳನ್ನು ಈ ಪ್ರಕರಣದಲ್ಲಿ ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ವಾದಿಯವರಿಗೆ ಇಬ್ಬರು ಅಣ್ಣ ತಮ್ಮಂದಿರು ಇರುತ್ತಾರೆ ಎಂದರೆ ಸರಿ. ಅವರ ಒಬ್ಬ ಸಹೋದರ ಮೃತಪಟ್ಟಿದ್ದು ಇನ್ನೊಬ್ಬರ ಹೆಸರು ಆರ್.ಟಿ.ಸಿಯಲ್ಲಿ ಕಾಣುತ್ತದೆ ಎಂದರೆ ಸರಿ. ಅವರ ಹೆಸರು ಅಚ್ಚಯ್ಯ ಆಗಿರುತ್ತದೆ ಅವರು ಈಗ ಮೃತಪಟ್ಟಿರುತ್ತಾರೆ. ಆದರೆ ಅವರಿಗೆ ಪತ್ನಿ ಮಕ್ಕಳು ಇರುತ್ತಾರೆ. ವಾದಿಯವರಿಗೆ ಅವರ ತಂದೆ ಅಥವಾ ಸಹೋದರರು ಆಸ್ತಿಗಳನ್ನು ಬರೆದುಕೊಟ್ಟಿರುವ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲ. ದಾವಾ ಸ್ವತ್ತು ಜಿ ಹಾಗೂ ಹೆಚ್ ಅನ್ನು ಹೊರುತುಪಡಿಸಿ ಇನ್ನಿತರೇ ಸ್ವತ್ತುಗಳ ಬಗ್ಗೆ ಅಂತಹ ದಾಖಲಾತಿಗಳು ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಜಿ ಹಾಗೂ ಹೆಚ್ ಅನ್ನು ಹೊರುತುಪಡಿಸಿ ಇನ್ನಿತರ ಸ್ವತ್ತುಗಳ ಬಗ್ಗೆ ಅಂತಹ ದಾಖಲಾತಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸ್ಥಿರ ಆಸ್ತಿಗಳ ವರ್ಗಾವಣೆಗೆ ದಾಖಲಾತಿಗಳು ಬೇಕು ಎಂದರೆ ಸರಿ. ಆ ಬಗ್ಗೆ ನಾನು ವಾದಿಯವರಿಂದ ತಿಳಿದುಕೊಂಡಿಲ್ಲ. ವಾದಿಯವರಿಗೆ ಸ್ವಾಧೀನವನ್ನು ಕೇಳಲು ದಾವೆಯನ್ನು ಹೂಡಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಅಚ್ಚಯ್ಯನವರು ಹೆಂಡತಿ ಮಕ್ಕಳು ಕುಶಾಲನಗರದಲ್ಲಿ ವಾಸಿಸುತ್ತಾರೆ ಎಂದರೆ ಸರಿ. ವಾದಿಯವರು ಗೌರಮ್ಮ ಎಂಬ ಹೆಸರಿನಿಂದ ಶುಭದಾಮಿನಿ ಎಂಬ ಹೆಸರಿಗೆ ತಮ್ಮ ಹೆಸರು ಬದಲಾವಣೆ ಕಾನೂನಿನ ರೀತಿಯಲ್ಲಿ ಮಾಡಿಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅವರು ಮಾಡಿರುತ್ತಾರೆ. ಅವರ ಹೆಸರು ಆರ್.ಟಿ.ಸಿ ಹಾಗೂ ಕಂದಾಯ ದಾಖಲಾತಿಗಳಲ್ಲಿ ಕಾನೂನು ಬಾಹಿರವಾಗಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರುಡಿಸಿರುವ ಪ್ಲಾನಿನಲ್ಲಿ ಸರ್ವೆ ನಂಬರ್ 375 ನಮೂದಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ನೀಡಿರುವ ಮುಕ್ತಾರು ನಾಮೆಯಲ್ಲಿ ದಾವಾ ಅನುಸೂಚಿ ಜಿ ಹಾಗೂ ಹೆಚ್ ಸ್ವತ್ತುಗಳು ನಮೂದಾಗಿರುವುದಿಲ್ಲ. ಆದ ಕಾರಣ ನನಗೆ ದಾವಾ ಅನುಸೂಚಿ ಜಿ ಹಾಗೂ ಹೆಚ್ ಸ್ವತ್ತುಗಳ ಬಗ್ಗೆ ನಡೆಸಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿಪಿ-21 ರಲ್ಲಿ ವಾದಿಯ ಹೆಸರು ಕಾಣುತ್ತಿಲ್ಲ ಗೌರಮ್ಮ ಹಾಗೂ ಅಚ್ಚಯ್ಯ ಎಂದು ನಮೂದಾಗಿದೆ ಎಂದರೆ ಸರಿ. ವಾದಿ ಹಾಗೂ ಗೌರಮ್ಮ ಒಂದೇ ರೀತಿಯಾಗಿರುತ್ತಾರೆ. ನಿಪಿ-21 ರಲ್ಲಿ ಗೌರಮ್ಮಯಿಂದ ಶುಭದಾಮಿನಿ ಎಂದು ಬದಲಾವಣೆ ಮಾಡಲು ಕ್ರಮ ವಾದಿ ಕೈಗೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆನುಸೂಚಿ ಸ್ವತ್ತುಗಳು ಆರ್ಜಿ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ಅದರಲ್ಲಿ ಸ್ವಲ್ಪ ಸ್ವತ್ತುಗಳು ಮುನಿಸಿಪಾಲಿಟಿಗೆ ವರ್ಗಾವಣೆಗೊಂಡಿದೆ ಎಂದರೆ ಸರಿ. ನಿಪಿ-21 ರಲ್ಲಿ ಅಚ್ಚಯ್ಯ ಎಂಬ ಹೆಸರು ಜಂಟಿಯಾಗಿ ಕಾಣುತ್ತಿದೆ ಎಂದರೆ ಅದರಲ್ಲಿ ನಮೂದಾಗಿರುವ ಇಸವಿಯಲ್ಲಿ ಅದು ಜಂಟಿಯಾಗಿದ್ದು. ಅಚ್ಚಯ್ಯ ಎಂಬ ಹೆಸರು ಕಾಣುತ್ತಿರುವ ಕಾರಣ ಅವರ ವಾರಸುದಾರರನ್ನು ಸಹ ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಬೇಕು ಎಂದರೆ ನನಗೆ ಗೊತ್ತಿಲ್ಲ.

ಅಚ್ಚಯ್ಯನವರು ಅವರ ಹಕ್ಕುನ್ನು ವಾದಿಯವರಿಗೆ ಬಿಟ್ಟು ಕೊಟ್ಟಿರುತ್ತಾರೆ. ಆ ಬಗ್ಗೆ ನಮ್ಮ ಬಳಿ ದಾಖಲಾತಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ

ಸಿ.ಮಹಾಲಕ್ಷ್ಮಿ
ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
**ವಿರಾಜಪೇಟೆ**